**ಅಧ್ಯಕ್ಷರು:** ಈ ರೀತಿಯಾದರೆ ನಾನು ಬೇರೆ ಪ್ರಶ್ನೆಯನ್ನು ಕೇಳುತ್ತೇನೆ. ನಾನು ಇದನ್ನು ಇಲ್ಲಿಗೆ ಮುಗಿಸುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್:** ಈ ಪ್ರಶ್ನೆಗಳನ್ನೆಲ್ಲ ಇವತ್ತು ವಾಪಸ್ಸು ಹಾಕಿಬಿಟ್ಟು ನೀವು ಸುಮ್ಮನೆ ತಗುಲಿಹಾಕಿಕೊಳ್ಳುತ್ತಿದ್ದೀರಿ. ನಮ್ಮ ಪ್ರಶ್ನೆಗಳನ್ನು ಮಾತ್ರ ನೀವು ಯಾವತ್ತೂ ಹಾಕಲಿಲ್ಲ.

**ಅಧ್ಯಕ್ಷರು:** ಅದು ಬಿ.ಎ.ಸಿ.ಯಲ್ಲಿ ಆದ ತೀರ್ಮಾನ. ನಾನೇನು ಮಾಡುವುದಕ್ಕೆ ಆಗುವುದಿಲ್ಲ. ಆಗ ನೀವೇನು ವಿರೋಧ ಮಾಡಲಿಲ್ಲವಲ್ಲ.

**ಶ್ರೀ ಡಿ.ಕೆ. ಶಿವಕುಮಾರ್:** ಬಿ.ಎ.ಸಿ.ಯಲ್ಲಿ ಎಲ್ಲಿ ತೀರ್ಮಾನವಾಗಿದೆ? ಯಾವ ಬಿ.ಎ.ಸಿ.ಯಲ್ಲೂ ತೀರ್ಮಾನವಾಗಿರಲಿಲ್ಲ.

**ಅಧ್ಯಕ್ಷರು:** ಆಗಿತ್ತು, ಸುಮ್ಮನೆ ಆಗಿಲ್ಲ ಎಂದು ಹೇಳುವುದು ಬೇಡ.

**ಅಡಿಕೆ ಬೆಳೆಗಾರರ ಬೆಳೆಗಳಿಗೆ ಬೆಂಬಲ ಬೆಲೆ ನಿಗದಿಪಡಿಸುವುದು**

2 (33) ಶ್ರೀ ಖಾದರ್ ಯು.ಟಿ. (ಮಂಗಳೂರು): ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಅಡಿಕೆ ಬೆಳೆಗಾರರಿಗೆ ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ಸಿಗದೇ ಇರುವುದರಿಂದ ಆರ್ಥಿಕವಾಗಿ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಪ್ರತಿ ವರ್ಷ ಅಡಿಕೆ ಬೆಳೆಗೆ ಸರ್ಕಾರ ಬೆಂಬಲ ಬೆಲೆಯನ್ನು ವೈಜ್ಞಾನಿಕವಾಗಿ ನೀಡಲು ಉದ್ದೇಶಿಸಿದೆಯೇ ?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು):

ಅ) ಹೌದು.

ಆ) ಹಿಂದಿನ ವರ್ಷಗಳಲ್ಲಿ ಅಡಿಕೆ ಬೆಲೆ ಕುಸಿತವಾದಾಗ ಸರ್ಕಾರವು ಬೆಂಬಲ ಬೆಲೆಯನ್ನು ನೀಡುವುದಲ್ಲದೇ 2009–10ನೇ ಸಾಲಿನಲ್ಲಿ ಪ್ರೋತ್ಸಾಹ ಧನವನ್ನು ನೀಡಿರುತ್ತದೆ. ಈ ವರ್ಷ ತೋಟಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ದಿನಾಂಕ: 6.1.2011ರ ಪತ್ರದಲ್ಲಿ ಭಾರತ ಸರ್ಕಾರದ ಕೃಷಿ ಮಂತ್ರಾಲಯಕ್ಕೆ ಚಾಲಿ ಹಾಗೂ ಕೆಂಪು ಅಡಿಕೆಯ ಉತ್ಪಾದನಾ ವೆಚ್ಚವನ್ನಾಧರಿಸಿ ಚಾಲಿ ಪ್ರಬೇಧದ ಅಡಿಕೆಗೆ ಪ್ರತಿ ಕ್ವಿಂಟಾಲ್‌ಗೆ ರೂ. 10,810/–, ಮಲೆನಾಡು ಕೆಂಪು ಅಡಿಕೆಗೆ ಪ್ರತಿ ಕ್ವಿಂ.ಗೆ ರೂ. 14,573/– ಹಾಗೂ ಬಯಲು ಸೀಮೆ ಕೆಂಪು ಅಡಿಕೆಗೆ ಪ್ರತಿ ಕ್ವಿಂ.ಗೆ ರೂ. 16,643/– ರಂತೆ ಬೆಂಬಲ ಬೆಲೆಯನ್ನು ಘೋಷಿಸಲು ಶಿಫಾರಸ್ಸು ಮಾಡಿರುತ್ತಾರೆ.

**ಶ್ರೀ ಯು.ಟಿ. ಖಾದರ್:** ಉತ್ತರವನ್ನು ಒದಗಿಸಿದ್ದಾರೆ. ಆದರೆ ಇದರಲ್ಲಿ ಯಾವುದೇ ಒಂದು ಪರಿಹಾರವಿಲ್ಲ. ಇವತ್ತು ಅಡಿಕೆ ಬೆಳೆಗಾರರು ಬಹಳ ಸಂಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಮಾರುಕಟ್ಟೆಯಲ್ಲಿ ಅಡಿಕೆಯನ್ನು ಕೊಳ್ಳುವವರೇ ಇಲ್ಲ. ಉತ್ತರ ಭಾರತದಿಂದ ಕರ್ನಾಟಕಕ್ಕೆ ಬಂದು ನಮ್ಮ ಜಿಲ್ಲೆಯಲ್ಲಿ ಇಡೀ ಟ್ರೇಡಿಂಗ್‌ಅನ್ನು ಮಾಡುತ್ತಿದ್ದಾರೆ. ನಾವು ಪ್ರಶ್ನೆ ಕೇಳಿದರೆ, ನಾವು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ ಎಂದು ರಾಜ್ಯ ಸರ್ಕಾರದವರು ಹೇಳುತ್ತಾರೆ. ಕೇಂದ್ರ ಸರ್ಕಾರಕ್ಕೆ ನೀವು ಬರೆಯಿರಿ. ಆದರೆ ಅಡಿಕೆ ಬೆಳೆಗಾರರ ರಕ್ಷಣೆಗೆ ನೀವೇನು ಮಾಡುತ್ತೀರಿ, ಇದಕ್ಕೆ ರಾಜ್ಯ ಸರ್ಕಾರದ ಕ್ರಮವೇನು? ರೈತರನ್ನು ರಕ್ಷಣೆ ಮಾಡಲು ತಾವು ಯಾವ ಕ್ರಮವನ್ನು ಕೈಗೊಳ್ಳುತ್ತೀರಿ ಎನ್ನುವುದನ್ನು ನೀವು ಹೇಳಬೇಕಾಗುತ್ತದೆ. ಇವತ್ತು ಸರ್ಕಾರ ಅಡಿಕೆ ಬೆಳೆಗಾರರ ಮತ್ತು ಕಾರ್ಮಿಕರ ರಕ್ಷಣೆಗೆ ಬರುವಂಥ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಸಹಕಾರ ಸಚಿವರು):** ಮಾನ್ಯ ಅಧ್ಯಕ್ಷರೆ, 2–3 ದಿನಗಳ ಹಿಂದೆ ಅನೇಕ ಜನ ಅಡಿಕೆ ಬೆಳೆಗಾರರ ಮುಖಂಡರು ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಮನವಿಯನ್ನೂ ಕೂಡ ಕೊಟ್ಟಿದ್ದಾರೆ.

ಸನ್ಮಾನ್ಯ ಮುಖ್ಯಮಂತ್ರಿಯವರೂ ಕೂಡ ಅದರ ಬಗ್ಗೆ ಬಹಳ ಸಮಾಧಾನವಾಗಿ ಆಲೋಚನೆ ಮಾಡಿ ಕೇಂದ್ರ ಸರ್ಕಾರ ಮತ್ತು ನಾವು ಒಟ್ಟಿಗೆ ಕೂಡಿಕೊಂಡು ಇದಕ್ಕೆ ಏನಾದರೊಂದು ಪರಿಹಾರವನ್ನು ಕೈಗೊಳ್ಳಬೇಕೆನ್ನುವ ಚಿಂತನೆಯಲ್ಲಿ ಈಗಾಗಲೇ ಇದ್ದಾರೆ. ಆ ಸಂದರ್ಭದಲ್ಲಿ ನಮ್ಮ ಕೃಷಿ ಮಾರುಕಟ್ಟೆಯ ಇಲಾಖೆಯ ಮುಖಾಂತರ Cabinet Sub Committee ಮಾಡಿ, ಆ Cabinet Sub Committee ಯಲ್ಲಿ ತುರ್ತು ಸಂದರ್ಭದಲ್ಲಿ ಬೆಲೆ ಕುಸಿದಾಗ ಚರ್ಚೆ ಕೈಗೊಂಡು, ನಾವು ಸನ್ಮಾನ್ಯ ಮುಖ್ಯಮಂತ್ರಿಯವರ ಜೊತೆ ಸಮಾಲೋಚನೆ ಮಾಡಿಕೊಂಡು ತುರ್ತು ಸಂದರ್ಭದಲ್ಲಿ ಯೋಗ್ಯ ಬೆಲೆಯನ್ನು ಕೊಡತಕ್ಕಂಥದ್ದು ಹಿಂದಿನಿಂದಲೂ ಮಾಡಿಕೊಂಡು ಬಂದಿರುವ ಪರಂಪರೆ ಇದೆ. ಆ ರೀತಿಯ ಸಂದರ್ಭ ಬಂದಾಗ ನಾವು Cabinet Sub Committee ಯಲ್ಲಿ ಚರ್ಚೆ ಮಾಡಿ ಹಣಕಾಸಿನ ಲಭ್ಯತೆಯನ್ನು ಮನವರಿಕೆ ಮಾಡಿಕೊಂಡು ಕ್ರಮ ತೆಗೆದುಕೊಳ್ಳುತ್ತೇವೆಂದು ತಮ್ಮ ಮೂಲಕ ಅವರಿಗೆ ಹೇಳಬಯಸುತ್ತೇನೆ.

**ಶ್ರೀ ಯು.ಟಿ. ಖಾದರ್:** ದೊಡ್ಡ ದೊಡ್ಡ ಅಡಿಕೆ ಬೆಳೆಗಾರರು ಸ್ವಲ್ಪ ಸಮಯ ನಿಲ್ಲಬಹುದು. ಸಣ್ಣ ಸಣ್ಣ ಬೆಳೆಗಾರರಿಗೆ ತಾವು ತೀರ್ಮಾನ ತೆಗೆದುಕೊಳ್ಳುವವರೆಗೆ ಅವರಿಗೆ ನಿಲ್ಲುವ ಶಕ್ತಿ ಇರುವುದಿಲ್ಲ. Immediate ಆಗಿ ಎಷ್ಟು ಬೆಲೆ ಸಿಗುತ್ತದೆಯೋ ಅಷ್ಟಕ್ಕೆ ಕೊಟ್ಟು ಅವರು ತಮ್ಮ ಜೀವನ ಸಾಗಿಸುತ್ತಾರೆ. ಸಣ್ಣ ರೈತರನ್ನು ಬಚಾವು ಮಾಡುವ ಉದ್ದೇಶದಿಂದ ತಕ್ಷಣವೇ ಸರ್ಕಾರ ಅವರ ಹಿತರಕ್ಷಣೆಗೆ ಬರಬೇಕು. ಅಡಿಕೆ ಬೆಳೆಗಾರರನ್ನು ಉಳಿಸುವ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):** ಅಡಿಕೆ ಬೆಳೆಗಾರರು ಇವತ್ತು ಅತ್ಯಂತ ಸಂಕಷ್ಟದಲ್ಲಿದ್ದಾರೆ. ಅಡಿಕೆ ಬೆಳೆಗಾರರ ಸಲುವಾಗಿ ಈಗಾಗಲೇ ಕರ್ನಾಟಕದ ಲೋಕಸಭಾ ಸದಸ್ಯರ ನಿಯೋಗ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿದಾಗ ಪ್ರಧಾನ ಮಂತ್ರಿಯವರೂ

ಕೂಡ ಅಡಿಕೆ ಬೆಳೆಗಾರರ ಸಹಾಯಕ್ಕೆ ಏನಾದರೂ ಮಾಡೋಣವೆನ್ನುವ ಭರವಸೆಯನ್ನು ಕೂಡ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರೂ ಕೂಡ ಸದನದಲ್ಲಿಯೇ ಇದ್ದಾರೆ. ಅಡಿಕೆ ಬೆಳೆಗಾರರೆಲ್ಲ ದೊಡ್ಡ ಬೆಳೆಗಾರರಲ್ಲ, ಅವರಲ್ಲಿ ಸಣ್ಣ ಸಣ್ಣ ಬೆಳೆಗಾರರೂ, ರೈತರು ಇದ್ದಾರೆ. ಈಗ ಅವರು ಬಹಳ ಕಷ್ಟದಲ್ಲಿ ಸಿಕ್ಕಿ ಹಾಕಿಕೊಳ್ಳುವವರು. ಅದಕ್ಕೆ ಸರ್ಕಾರ ಕೂಡಲೇ ಅವರಿಗೆ ಯಾವ ರೀತಿ ಸಹಾಯ ಮಾಡಬಹುದೆನ್ನುವುದನ್ನು ಸದನದಲ್ಲಿಯೇ ಘೋಷಣೆ ಮಾಡಿ. ಅವರ ಸಂಕಷ್ಟಕ್ಕೆ ಧಾವಿಸಿ. ಕೃಷಿ ಬಜೆಟ್ ಎಂದು separate ಆಗಿ ಮಂಡಿಸುತ್ತಿದ್ದೇವೆಂದು ಹೇಳುತ್ತೀರಿ. ಅಡಿಕೆ ಬೆಳೆ ಬಿದ್ದು ಹೋದರೆ ಆ ಬೆಳೆಗಾರರ ಸಹಾಯಕ್ಕಾಗಿ ಏನು ಮಾಡಬೇಕೆಂಬುದನ್ನು ಯೋಚನೆ ಮಾಡಬೇಕಲ್ಲವೇ? ಕೂಡಲೇ ಅವರ ಸಹಾಯಕ್ಕೆ ಹೋಗಬೇಕಲ್ಲವೇ? ಆದ್ದರಿಂದ, ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು, Horticulture Minister ರವರು ಇದ್ದಾರೆ. ಕೂಡಲೇ ಅವರಿಗೆ Floor Price ಅನ್ನು ನಿಗದಿ ಮಾಡಿ. ಸರ್ಕಾರ ಕೂಡಲೇ market intervene ಮಾಡಿ ಅವರಿಗೆ ರಕ್ಷಣೆ ಕೊಟ್ಟು ಅವರ ಕಷ್ಟ ಪರಿಹಾರ ಮಾಡುವ ಕೆಲಸವನ್ನು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ಒತ್ತಾಯ ಮಾಡುತ್ತೇನೆ.

**ಶ್ರೀ ಟಿ.ಬಿ. ಜಯಚಂದ್ರ:** ಮಾನ್ಯ ಅಧ್ಯಕ್ಷರೆ,

**ಅಧ್ಯಕ್ಷರು:** ಪ್ರಶ್ನೋತ್ತರದಲ್ಲಿ ಎಲ್ಲರೂ ಎದ್ದು ನಿಂತು ಹೇಳಿದ್ದನ್ನೇ ಹೇಳಿದರೆ ಹೇಗೆ? ಇಲ್ಲ, ಅವಕಾಶವಿಲ್ಲ. ಅಡಿಕೆ ಬೆಳೆಗಾರರ ಬಗ್ಗೆ ಚರ್ಚೆ ಮಾಡಲು ಬೇರೆ ರೂಪದಲ್ಲಿ ನೋಟೀಸ್ ಕೊಡಿ.

**ಶ್ರೀ ಟಿ.ಬಿ. ಜಯಚಂದ್ರ:** ಮಾನ್ಯ ಮುಖ್ಯಮಂತ್ರಿಯವರೆ, ತಾವು ಉತ್ತರ ಕೊಡುವ ಮುಂಚೆ ಒಂದೇ ಒಂದು ಸಲಹೆ ಕೊಡುತ್ತೇನೆ. ಏಕೆಂದರೆ, ತಾವು ಉತ್ತರ ಕೊಟ್ಟಮೇಲೆ ಅದು ಅಂತಿಮವಾಗುತ್ತದೆ. ಆಮೇಲೆ, ಅದು ಸರಿ ಹೋಗುವುದಿಲ್ಲ. Floor Price ಅನ್ನು fix

ಮಾಡುವುದು ರಾಜ್ಯ ಸರ್ಕಾರ ಮಾತ್ರ. ಕೇಂದ್ರ ಸರ್ಕಾರದ ಇದರಲ್ಲಿ interfere ಆಗುವುದಿಲ್ಲ. ಕೇಂದ್ರ ಸರ್ಕಾರ 50% of the floor Price ಅನ್ನು ಕೊಡುವುದಕ್ಕೆ ಬದ್ಧವಾಗಿರುತ್ತದೆ. ಆ ಕಾರಣದಿಂದ, ನೀವು ಇದಕ್ಕೆ ಕೇಂದ್ರ ಸರ್ಕಾರವನ್ನು ಕಾಯುವ ಅವಶ್ಯಕತೆ ಇಲ್ಲ. ನಿಮ್ಮ ಶಿಫಾರಸ್ಸನ್ನು ಒಪ್ಪಿಕೊಂಡು ನೀವು ತೀರ್ಮಾನ ಮಾಡಿದರೆ, ನಂತರ ಅದರಲ್ಲಿ 50% ಹಣವನ್ನು ಕೇಂದ್ರ ಸರ್ಕಾರ ಕೊಡುತ್ತದೆ, ನೀವು 50% ಹಣವನ್ನು add ಮಾಡಿ ಕೊಡಬಹುದು. ಇದು MSPಗೆ ಬರುವುದಿಲ್ಲ. ಇದು support price ಆಗಿರುವುದರಿಂದ ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲೇ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ನಮ್ಮ ಭಾಗದಲ್ಲಿ ಕ್ವಿಂಟಲ್‌ಗೆ 18000 ರೂಪಾಯಿ ಬೆಲೆಯ ಅಡಿಕೆಯನ್ನು ಇವತ್ತು 9000 ರೂಪಾಯಿಗಳಿಗೂ ಕೇಳುವವರು ಗತಿ ಇಲ್ಲ. ಅವರ ಕಥೆ ಏನು? ಅವರು ಜೀವನ ಮಾಡುವುದು ಹೇಗೆ? ಮಾಡಿರುವ ಸಾಲವನ್ನು ಅವರು ತೀರಿಸುವುದು ಹೇಗೆ? ಮಧ್ಯಮ ಕರ್ನಾಟಕದಲ್ಲಿ ಅದರಲ್ಲೂ ತುಮಕೂರು, ಚಿತ್ರದುರ್ಗ ಭಾಗಗಳಲ್ಲಿ ಅಡಿಕೆ ಬೆಳೆಯುವವರಿಗೆ ಬಹಳಷ್ಟು effect ಆಗಿದೆ. ದಯಮಾಡಿ, ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಯವರು interfere ಆಗಿ ಸಹಾಯ ಮಾಡಬೇಕು. ತಾವು immediate ಆಗಿ procurement ಅನ್ನು start ಮಾಡುವ ಕೆಲಸವನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ):** ದಿನಾಂಕ: 1-03-2011ರಂದು 2011ನೇ ಸಾಲಿನಲ್ಲಿ ರಾಜ್ಯದ ಅಡಿಕೆ ಬೆಳೆಗಾರರ ಹಿತದೃಷ್ಟಿಯಿಂದ ರೈತರು ಬೆಳೆದಂಥ FAQ ಗುಣಮಟ್ಟದ ಬಿಳಿ ಚಾಲಿ ಅಡಿಕೆಗೆ ಕೇಂದ್ರ ಸರ್ಕಾರ ಹಿಂದೆ market ಮಧ್ಯ ಪ್ರವೇಶ ಯೋಜನೆಯಡಿಯಲ್ಲಿ ಚಾಲಿ ಅಡಿಕೆ ಖರೀದಿಸುವುದಕ್ಕೆ 6900 ರೂಪಾಯಿಗಳನ್ನು ನಿಗದಿ ಮಾಡಿದ್ದರು. ಪ್ರತಿ ಕ್ವಿಂಟಲ್‌ಗೆ 600 ರೂಪಾಯಿ ಸೇರಿಸಿ 7500 ರೂಪಾಯಿ ದರದಲ್ಲಿ ಗರಿಷ್ಠ 8000 metric tonne ಚಾಲಿ

ಅಡಿಕೆಯನ್ನು ಖರೀದಿ ಮಾಡುವುದಕ್ಕೆ ಈಗಾಗಲೇ ಅನುಮೋದನೆ ಕೊಟ್ಟು 25 ಕೋಟಿ ರೂಪಾಯಿಗಳನ್ನು ಈಗಾಗಲೇ ನಾವು Campco, ಮಂಗಳೂರು, Mamcose, ಶಿವಮೊಗ್ಗ, ಸಾಗರದ APSCOSe and TAPCMS, ಶಿರಸಿಯ Totagars Sales Society ಸಾಗರ ಇಲ್ಲಿ ಖರೀದಿ ಮಾಡುವುದಕ್ಕೆ 25 ಕೋಟಿ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಈಗ ಸ್ವಲ್ಪ ಸುಧಾರಣೆಯಾಗಿದೆ. ಅಗತ್ಯ ಬಿದ್ದರೆ ಇನ್ನೂ ಹೆಚ್ಚು ಸಹಾಯ ಮಾಡುವುದಕ್ಕೆ ಕೇಂದ್ರ ಸರ್ಕಾರದ ಜೊತೆ ವ್ಯವಹರಿಸುತ್ತೇನೆ. ಅಡಿಕೆ ಬೆಳೆಗಾರರು ಬಹಳ ತೊಂದರೆಯಲ್ಲಿದ್ದಾರೆ. ಅವರ ರಕ್ಷಣೆಗೆ ಬರುವುದಕ್ಕೆ ಸರ್ಕಾರ ಸಿದ್ಧವಿದೆ. ಈಗಾಗಲೇ 25 ಕೋಟಿ ರೂಪಾಯಿಗಳನ್ನು market ಬೆಲೆಯಲ್ಲಿ ಖರೀದಿ ಮಾಡುವುದಕ್ಕೆ ಬಿಡುಗಡೆ ಮಾಡಿದ್ದೇನೆ. ಕೇಂದ್ರ ಸರ್ಕಾರ ನಿಗದಿ ಮಾಡಿರುವುದರ ಜೊತೆಗೆ ಕ್ವಿಂಟಲ್‌ಗೆ 600 ರೂಪಾಯಿಗಳನ್ನು ಹೆಚ್ಚುವರಿಯಾಗಿ ಕೊಟ್ಟು ಖರೀದಿ ಮಾಡುವುದಕ್ಕೆ 25 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇನೆ.

**ಶ್ರೀ ಸಿದ್ದರಾಮಯ್ಯ:** ಕೇಂದ್ರ ಸರ್ಕಾರ fix ಮಾಡಿರುವುದು floor Price ಅಲ್ಲ. ಅವರು fix ಮಾಡಿರುವುದು minimum support price. ಅದು ಬೇರೆ. ಈಗ ಮಾರ್ಕೆಟ್‌ನಲ್ಲಿ ರೈತರಿಗೆ ಎಷ್ಟು ನಷ್ಟವಾಗುತ್ತಿದೆ ಆ ನಷ್ಟವನ್ನು ಭರಿಸಲಿಕ್ಕೋಸ್ಕರವಾಗಿ ರಾಜ್ಯ ಸರ್ಕಾರ Market intervention Scheme ಅನ್ನು ಇಟ್ಟುಕೊಂಡಿದೆ. ಈ ವರ್ಷ 750 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದೇವೆಂದು ಹೇಳಿದ್ದೀರಿ. ಮುಂದಿನ ವರ್ಷಕ್ಕೆ 1000 ಕೋಟಿ ರೂಪಾಯಿಗಳನ್ನು ಇಡುತ್ತೇವೆಂದು ಹೇಳುತ್ತೀರಿ. ರೈತರಿಗೆ ನಷ್ಟವಾಗದ ರೀತಿಯಲ್ಲಿ ಇಷ್ಟು ಬೆಲೆ ಕೊಟ್ಟು ಬೆಲೆ stabilize ಆಗುವವರೆಗೆ ನಾವು market intervene ಆಗುತ್ತೇವೆ, ಸರ್ಕಾರ ಕೊಂಡುಕೊಳ್ಳುತ್ತದೆ, APMC, ಕೊಂಡುಕೊಳ್ಳುವವರು ಯಾರೋ ಅದನ್ನು ಮಾಡುತ್ತಾರೆನ್ನುವ ಆ ಘೋಷಣೆಯನ್ನಾದರೂ ಮಾಡಿ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಈಗಾಗಲೇ ಕೇಂದ್ರ ಸರ್ಕಾರಕ್ಕೆ ಒಂದು ಪ್ರಪೋಸಲ್ ಅನ್ನು ಕಳುಹಿಸಿಕೊಟ್ಟು minimum support price fix ಮಾಡಿ ಎಂದು request ಮಾಡಿಕೊಂಡಿದ್ದೇವೆ. So far, ಅಲ್ಲಿಂದ ಏನೂ ನಮಗೆ ಮಾಹಿತಿ ಸಿಕ್ಕಿಲ್ಲ. ನಾವು ಒತ್ತಡ ತರೋಣ. ಈ ಮಧ್ಯೆ 6900 ರೂಪಾಯಿ ಇರುವುದಕ್ಕೆ ಇನ್ನೂ 600 ರೂಪಾಯಿಗಳನ್ನು ಸೇರಿಸಿ 7500 ರೂಪಾಯಿಗಳಂತೆ ತಕ್ಷಣ ಖರೀದಿ ಮಾಡುವುದಕ್ಕೆ 25 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇನೆ. Association ನವರೂ ಬಂದಿದ್ದರು, ಅವರ ಜೊತೆ ಚರ್ಚೆ ಮಾಡಿದ್ದೇನೆ. ಸರ್ಕಾರ immediate ಆಗಿ 25 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಇನ್ನೂ ಹೆಚ್ಚು ಅವರ ಮಾಹಿತಿಗಳನ್ನು ಪಡೆದುಕೊಂಡು ಬರುವ ದಿವಸಗಳಲ್ಲಿ ಕೇಂದ್ರ ಸರ್ಕಾರದ ಸಹಾಯವನ್ನೂ ಪಡೆದು ಅಡಿಕೆ ಬೆಳೆಗಾರರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನನ್ನ ಸರ್ಕಾರದ ಇತಿಮಿತಿಯಲ್ಲಿ ಪ್ರಯತ್ನ ಮಾಡುತ್ತೇನೆ. ದಯಮಾಡಿ, ನನ್ನ ಇತಿಮಿತಿ ಅರ್ಥಮಾಡಿಕೊಳ್ಳಿ. ಜಯಚಂದ್ರರವರೆ, I agree with you. ನಾನೂ ಸಹ ಒಬ್ಬ ಅಡಿಕೆ ಬೆಳೆಗಾರ.

**ಶ್ರೀ ಟಿ.ಬಿ. ಜಯಚಂದ್ರ:** ಅಡಿಕೆ ಬೆಳೆ ಸಂಪೂರ್ಣವಾಗಿ ನಾಶವಾಗಿ ಹೋಗಿದೆ. ಕೇಂದ್ರಕ್ಕೆ ಒಂದು ನಿಯೋಗವನ್ನು ಕರೆದುಕೊಂಡು ಹೋಗುವ ನಿಟ್ಟಿನಲ್ಲಿ ಪ್ರಯತ್ನ ಮಾಡಿ.

**ಶ್ರೀ ಬಿ.ಎಸ್. ಯಡಿಯೂರಪ್ಪ:** I am ready. ಹೇಗಿದ್ದರೂ ಬೇರೆ ವಿಷಯಕ್ಕೆ ಪ್ರತಿಪಕ್ಷದ ನಾಯಕರ ಸಭೆ ಕರೆದಿದ್ದೇನೆ, ಆ ಸಂದರ್ಭದಲ್ಲಿ ಇದರ ಬಗ್ಗೆಯೂ ಚರ್ಚೆ ಮಾಡಿ ಕೇಂದ್ರಕ್ಕೆ ನಿಯೋಗ ತೆಗೆದುಕೊಂಡು ಹೋಗುವುದಕ್ಕೆ, ಅಡಿಕೆ ಬೆಳೆಗಾರರನ್ನು ಉಳಿಸುವುದಕ್ಕೆ ಏನೇನು ಪ್ರಯತ್ನ ಮಾಡುವುದಕ್ಕೆ ಸಾಧ್ಯವಿದೆಯೋ ಅದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

**ಶ್ರೀ ಡಿ.ಎನ್. ಜೀವರಾಜ್:** ಮಾನ್ಯ ಅಧ್ಯಕ್ಷರೆ,

**ಅಧ್ಯಕ್ಷರು:** ಪ್ರಶ್ನೋತ್ತರದಲ್ಲಿ ನೀವು ಹೀಗೆ ಕೇಳಿದರೆ ಹೇಗೆ? ಇಲ್ಲ. ಅವಕಾಶವಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ):** ಬೆಂಬಲ ಬೆಲೆ ಕೊಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದನ್ನು ಅಡಿಕೆ ಬೆಳಗಾರನಾಗಿ ಸ್ವಾಗತ ಮಾಡುತ್ತೇನೆ. ಆದರೆ, ಅದಕ್ಕಿಂತ ಬಹಳ ಮುಖ್ಯವಾಗಿ ನಮಗೆ ಕಂಟಕವಾಗಿರುವುದೇನೆಂದರೆ, ಗುಟ್ಕಾವನ್ನು plastic sachet ನಲ್ಲಿ ಕೊಡಬಾರದೆನ್ನುವಂಥ ಆದೇಶವನ್ನು ಮಾರ್ಚ್ ತಿಂಗಳು ಕಳೆದ ಕೂಡಲೆ ಮಾಡುವುದಕ್ಕೆ ಹೊರಟಿದ್ದಾರೆ. ಇಲ್ಲಿ ನಮ್ಮ ಸರ್ಕಾರ 15 ಸಾವಿರ ರೂಪಾಯಿಗಳಿಗೆ ಕೊಂಡುಕೊಂಡರೂ ಅದನ್ನು ಕೊಂಡುಕೊಳ್ಳಲಿಕ್ಕೆ ಅಲ್ಲಿ ಜನರಿಲ್ಲ. ಏಕೆಂದರೆ, ಆ ಅಡಿಕೆ ಗುಟ್ಕಾ sachet ಒಳಗಡೆ ಬರುವುದಿಲ್ಲವೆನ್ನುವ ಕಾರಣಕ್ಕಾಗಿ ಹೀಗಾಗಿದೆ. ಹಾಲು plastic ನಲ್ಲಿ ಬರುತ್ತದೆ, ಮಾತ್ರೆ plastic ನಲ್ಲಿ ಬರುತ್ತದೆ, chocolate plastic ನಲ್ಲಿ ಬರುತ್ತದೆ, ಹೀಗೆ ಈ ದೇಶದಲ್ಲಿ ಎಲ್ಲವೂ plastic ನಲ್ಲಿ ಬರುತ್ತದೆ. ಗುಟ್ಕಾವನ್ನು plastic sachet ನಲ್ಲಿ ಕೊಡಬಾರದು ಎಂದು ban ಮಾಡುವ ವ್ಯವಸ್ಥೆ ಏನಿದೆ, ಇದು ಸರಿಯಲ್ಲ.

**ಶ್ರೀ ಡಿ.ಕೆ. ಶಿವಕುಮಾರ್:** ಈ ಬಗ್ಗೆ ನೀವು Supreme Court ನಲ್ಲಿ challenge ಮಾಡಿ.

**(ಗೊಂದಲ)**

**ಶ್ರೀ ಡಿ.ಎನ್. ಜೀವರಾಜ್:** ನೀವು ಅಡಿಕೆ ಬೆಳೆಗಾರರ ಪರವಾಗಿ ಬನ್ನಿ. ನಾನು ಯಾವುದೇ ಸರ್ಕಾರದ ಮೇಲೆ ಆರೋಪ ಮಾಡುತ್ತಿಲ್ಲ. ಶಿವಕುಮಾರ್‌ರವರು ಹೇಳುವುದು ನೋಡಿದರೆ ನಾನು ಕೇಂದ್ರ ಸರ್ಕಾರದ ಮೇಲೆ ಹೇಳುತ್ತಿದ್ದೇನೆ ಎನ್ನುವ ಹಾಗಿದೆ. ನಾನು ಹಾಗೆ ಹೇಳಿಲ್ಲ. ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ. ದಯಮಾಡಿ, ಮಾನ್ಯ ಮುಖ್ಯ ಮಂತ್ರಿಯವರು ಅಡಿಕೆ ಬೆಳೆಗಾರರಿಗೋಸ್ಕರ ಕೇಂದ್ರಕ್ಕೆ ನಿಯೋಗ

ತೆಗೆದುಕೊಂಡು ಹೋಗಿ ಕೇಂದ್ರದ ಪರಿಸರ ಖಾತೆ ಸಚಿವರ ಜೊತೆ ಅಥವಾ ವಾಣಿಜ್ಯ ಸಚಿವರ ಜೊತೆಯೋ ಮಾತನಾಡಿ ಈ ಸಮಸ್ಯೆಯನ್ನು ಬಗೆಹರಿಸಿ ಕೊಡಬೇಕು. ಅಡಿಕೆ 15 ದೇಶಗಳಿಗೆ ರಫ್ತು ಆಗುತ್ತಿದ್ದು ಅಲ್ಲಿ plastic sachet ban ಆಗಿಲ್ಲ. ಭಾರತದಲ್ಲಿ ಅಡಿಕೆ ಬೆಳೆಗಾರರ ರಕ್ಷಣೆಗೆ ಬರಬೇಕಾದಂಥ ಸರ್ಕಾರಗಳು ನಮ್ಮ ರಕ್ಷಣೆಗೆ ಬರದಿದ್ದರೆ ಅಡಿಕೆ ಬೆಳೆಗಾರ ರಸ್ತೆಗೆ ಬಂದು ನಿಲ್ಲುತ್ತಾನೆ. ಅಡಿಕೆ ಬೆಳೆಗಾರರ ಈ ಸಮಸ್ಯೆಯನ್ನು ಬಗೆಹರಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿಸುತ್ತೇನೆ, ಹಾಗೆಯೇ ಮಾನ್ಯ ಮುಖ್ಯಮಂತ್ರಿಯವರು ನಿಯೋಗ ಕರೆದುಕೊಂಡು ಹೋಗುವ ಮೂಲಕ ಅಡಿಕೆ ಬೆಳೆಗಾರರ ರಕ್ಷಣೆಗೆ ಬನ್ನಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ):** ನಾನು ಇದರ ಬಗ್ಗೆ ಗಮನ ಸೆಳೆಯುವ ಸೂಚನೆ ತಂದಿದ್ದೇನೆ. ಕರ್ನಾಟಕದಲ್ಲಿ ಸುಮಾರು 5 ಲಕ್ಷ ಎಕರೆ ಅಡಿಕೆ ತೋಟ ಇದೆ. ನಿಮ್ಮ ಜಿಲ್ಲೆ ಸೇರಿದಂತೆ ಎರಡು ಜಿಲ್ಲೆಗಳನ್ನು ಹೊರತುಪಡಿಸಿ 5 ಲಕ್ಷ ಎಕರೆ ಬರುತ್ತದೆ. ಸುಮಾರು 6 ಲಕ್ಷ ಕುಟುಂಬಗಳು ಇದರ ಮೇಲೆಯೇ ಅವಲಂಬಿತವಾಗಿವೆ. ಒಂದು-ಒಂದೂವರೆ ತಿಂಗಳಿಂದ market ನಿಂತುಹೋಗಿದೆ. ಈ ವಿಷಯ ಮಾನ್ಯ ಮುಖ್ಯಮಂತ್ರಿಯವರಿಗೆ ಗೊತ್ತಿದೆ. ಈಗಾಗಲೇ ಅವರ ಜೊತೆ ಮಾತುಕತೆಗೆ ಕೂಡ ಬಂದಿದ್ದಾರೆ. 20 ಸಾವಿರ ಕೋಟಿ ರೂಪಾಯಿಗಳ ವ್ಯವಹಾರ ನಡೆಯುತ್ತಿದೆ. ಕೇವಲ ಅಡಿಕೆ ಬೆಳೆಗಾರರಿಂದಲೇ ಮಾರ್ಕೆಟ್‌ನಿಂದ 1500 ಕೋಟಿ ರೂಪಾಯಿಗಳ ಆದಾಯ ಕರ್ನಾಟಕ ಸರ್ಕಾರಕ್ಕೆ ಇದೆ. ಒಂದು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಆದಾಯವಿದೆ. APMC ಯಲ್ಲಿ ಸ್ವಲ್ಪ correct ಆಗಿ ನಡೆಸದಿರುವುದರಿಂದ, ಸ್ವಲ್ಪ ಕಳ್ಳ ವ್ಯವಹಾರದಲ್ಲಿ ಹೊರಗಡೆ ಹೋಗುತ್ತಿದೆ. ಅದನ್ನು ಸಂಪೂರ್ಣವಾಗಿ ಹಿಡಿತಕ್ಕೆ ತೆಗೆದುಕೊಂಡರೆ ಸುಮಾರು ಎರಡು-ಎರಡೂವರೆ ಸಾವಿರ ಕೋಟಿ ರೂಪಾಯಿಗಳಷ್ಟು APMC ಮೂಲಕವೇ ಆದಾಯ ಬರುವ ವ್ಯಾಪಾರವಾಗಿದೆ. ಶಿವಮೊಗ್ಗ

APMC yard ನಲ್ಲಿಯೇ ಸುಮಾರು 200 ಕೋಟಿ ರೂಪಾಯಿಗಳಷ್ಟು ವ್ಯಾಪಾರ ನಡೆಯುತ್ತಿದೆ. ಕಳೆದ ಒಂದೂವರೆ ತಿಂಗಳಿನಿಂದ ಅಡಿಕೆ ವ್ಯಾಪಾರ ನಿಂತುಹೋಗಿದೆ. ಅಡಿಕೆ ಕೊಳ್ಳಲು ಯಾರೂ ಮುಂದೆ ಬರುತ್ತಿಲ್ಲ. ಇದರಲ್ಲಿ ಎರಡು problems ಇದೆ. ಈಗಾಗಲೇ ಜೀವರಾಜ್ ಹೇಳಿದ್ದಾರೆ. ನಾನು, ಸಿ.ಟಿ. ರವಿ, ಎಲ್ಲರೂ ಕೂಡ ಅದೇ ಭಾಗದಿಂದ ಬಂದಿರುವವರು. ಸುಮಾರು 70 ರಿಂದ 80 ಶಾಸಕರು ಅಡಿಕೆ ಬೆಳೆಯುವ ಜಿಲ್ಲೆಗಳಿಂದಲೇ ಆರಿಸಿ ಬಂದಿರುವವರು. ಅದರಲ್ಲಿ ತುಮಕೂರು, ದಾವಣಗೆರೆ, ಚಿತ್ರದುರ್ಗ, South canara, North Canara, Udupi ಈ ಜಿಲ್ಲೆಗಳೂ ಸೇರುತ್ತವೆ. 28ನೇ ತಾರೀಖಿನೊಳಗೆ, 31ನೇ ತಾರೀಖಿನೊಳಗೆ ಸಹಕಾರ ಸಂಘಗಳಿಗೆ ಹಣ ಕಟ್ಟದಿದ್ದರೆ ಮನೆ ಹರಾಜು ಮಾಡುತ್ತೇವೆನ್ನುತ್ತಾರೆ. ಸಾಲ ತೆಗೆದುಕೊಂಡವರೆಲ್ಲ ಈ time ನಲ್ಲಿ ಅಡಿಕೆ sale ಮಾಡಿ ಹಣ ಜಮಾ ಮಾಡಬೇಕು. ಈಗ ಬ್ಯಾಂಕ್‌ಗೆ ಹಣ ಕಟ್ಟಬೇಕು. ಅಡಿಕೆ ಬೆಳೆಗಾರನಿಗೆ ಈಗ ವ್ಯಾಪಾರವೇ ಇಲ್ಲ. ಯಾರೂ ಕೊಡುವವರೂ ಇಲ್ಲ, ತೆಗೆದುಕೊಳ್ಳುವವರೂ ಇಲ್ಲ. ಮಾನ್ಯ ಮುಖ್ಯಮಂತ್ರಿಯವರು ರೈತರ ಪರವಾಗಿ ನಿಲ್ಲುವ ಆಸಕ್ತಿಯನ್ನು ಹೊಂದಿದ್ದಾರೆಂದು ನನಗೆ ಗೊತ್ತಿದೆ. ಆ ನಿಟ್ಟಿನಲ್ಲಿ ಈಗಾಗಲೇ ಮಾತುಕತೆ ನಡೆಸಿದ್ದಾರೆ. ರಾಜ್ಯ ಸರ್ಕಾರ ಒಂದೇ ಇದನ್ನು ಬಗೆಹರಿಸುವುದಕ್ಕಾಗುತ್ತದೆ ಇಲ್ಲವೇ ನನಗೆ ಗೊತ್ತಿಲ್ಲ. ಆದರೆ, ರಾಜ್ಯ ಸರ್ಕಾರ ಸಂಪೂರ್ಣವಾಗಿ ಅಡಿಕೆ ಬೆಳಗಾರರ ಹಿತರಕ್ಷಣೆಯನ್ನು ಕಾಪಾಡುವ ದೃಷ್ಟಿಯಲ್ಲಿ ಗಮನಹರಿಸಬೇಕು. 6 ಲಕ್ಷ ಕುಟುಂಬಗಳು ಇದರ ಮೇಲೆ ಅವಲಂಬಿತವಾಗಿವೆ. ಕಳೆದ 10 ವರ್ಷಗಳಿಂದ ಲೆಕ್ಕ ಹಾಕಿದರೆ ದೇಶದಲ್ಲಿ ಕೃಷಿಕ ಸಮಾಜ 10 ಲಕ್ಷ ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಳೆದ 2–3 ತಿಂಗಳಲ್ಲಿ ಕೇವಲ ಅಡಿಕೆ ಬೆಳೆಗಾರರು ಮಾತ್ರವಲ್ಲ, ಇದರೊಳಗೆ ವ್ಯವಹಾರದಾರರು ಇದ್ದಾರೆ, ಅದರ ಮೇಲೆ ಅವಲಂಬಿತರಾದಂಥ ಕೃಷಿ ಕಾರ್ಮಿಕರಿದ್ದಾರೆ, dependents ಎಲ್ಲರೂ ಇದ್ದಾರೆ. ಅವರೆಲ್ಲರೂ ಸತ್ತುಹೋಗತಕ್ಕಂಥ ಪರಿಸ್ಥಿತಿ ಇದೆ. ತಕ್ಷಣ ಬೆಳೆಗಾರರ ಪರವಾಗಿ ಸರ್ಕಾರ

ನಿಲ್ಲಬೇಕು. ಕೇಂದ್ರ ಸರ್ಕಾರದಿಂದ ಏನಾಗಬೇಕೆನ್ನುವುದು ನನಗೆ ಗೊತ್ತಿಲ್ಲ. ಇಂದಿನ ಪತ್ರಿಕೆಯಲ್ಲಿ ಬಂದಿರುವ ಪ್ರಕಾರ ಪ್ರಧಾನಿಯವರನ್ನು ಭೇಟಿ ಮಾಡಿದ್ದು, ಅವರು ಏನೋ ಭರವಸೆ ಕೊಟ್ಟಿದ್ದಾರೆ. ತೀರ್ಥಹಳ್ಳಿ APMC yard ಶಿವಮೊಗ್ಗದಲ್ಲಿ 30 ಸಾವಿರ ಕ್ವಿಂಟಾಲ್ ಅಡಿಕೆ ಹೋಗಿರುವಂಥದ್ದನ್ನು ಇವತ್ತು ಒಂದು ರೂಪಾಯಿಗೂ ಸಹ ಕೊಂಡುಕೊಳ್ಳುವವರಿಲ್ಲ. ರಾಜ್ಯ ಸರ್ಕಾರದವರು ರೈತರ ಹಿತವನ್ನು ಕಾಪಾಡುವುದಕ್ಕೆ ಬರಬೇಕೆಂದು ಮನವಿ ಮಾಡುತ್ತಿದ್ದೇನೆ. ಈಗ ಎಲ್ಲರೂ ಹೋರಾಟಕ್ಕೆ ನಿಂತಿದ್ದಾರೆ. 7ನೇ ತಾರೀಖು ಶಿವಮೊಗ್ಗದಲ್ಲಿ strike ಮಾಡುತ್ತಿದ್ದಾರೆ. Delhiಗೆ ಹೋಗಬೇಕೆಂದು 2000 ಜನ ಬೆಳೆಗಾರರು ರೈಲಿನಲ್ಲಿ seat booking ಮಾಡಿದ್ದಾರೆ. ಪ್ರತಿಪಕ್ಷದ ನಾಯಕರು, ನೀವು ಎಲ್ಲರೂ ಸೇರಿ ಎಲ್ಲೋ ಒಂದು settlement ಮಾಡಬೇಕು. ರೈತರು ಬಹಳ ತೊಂದರೆ ಅನುಭವಿಸುತ್ತಿದ್ದಾರೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಈ ಸಮಸ್ಯೆ ನನಗೆ ಗೊತ್ತಿದೆ. ನಾನು ಚರ್ಚೆ ಮಾಡಿದ್ದೇನೆ. ಗುಟ್ಕಾವನ್ನು plastic sachet ನಲ್ಲಿ ಮಾರಾಟ ಮಾಡುವುದನ್ನು ಬ್ಯಾನ್ ಮಾಡುವ ಸೂಚನೆ ಏನಿದೆ, ಇದರ ವಿರುದ್ಧ Supreme Court ನಲ್ಲಿ ವಾದ ಮಾಡಲು ಒಬ್ಬರು advocate ಅನ್ನು ನೇಮಿಸುತ್ತಿದ್ದೇವೆ. ಜೊತೆಗೆ ಪ್ರತಿಪಕ್ಷದ ನಾಯಕರ ಜೊತೆ ಸಮಾಲೋಚನೆ ಮಾಡುತ್ತೇನೆ. ಅಡಿಕೆ ಕೊಂಡುಕೊಳ್ಳುವ ಸಂಸ್ಥೆಯವರನ್ನೂ ಕರೆಯುತ್ತೇನೆ. ಅಡಿಕೆ ಬೆಳೆಗಾರರಿಗೆ ಸಂಬಂಧಪಟ್ಟ ಶಾಸಕರನ್ನೂ ಕರೆದು ಚರ್ಚೆ ಮಾಡೋಣ. ಅಡಿಕೆ ಬೆಳೆಗಾರರು ಸಂಕಷ್ಟದಲ್ಲಿರುವುದು ನಿಜ. ಅದಕ್ಕೆ ಒಂದು ಪರಿಹಾರ ಹುಡುಕಬೇಕಾದದ್ದು ನಮ್ಮ ಆದ್ಯ ಕರ್ತವ್ಯ. ಪ್ರತಿಪಕ್ಷದ ನಾಯಕರನ್ನೂ ಕರೆದುಕೊಂಡು ಹೋಗುತ್ತೇವೆ. ಈಗಾಗಲೇ ಕೇಂದ್ರದಲ್ಲಿ ನಮ್ಮ MPಗಳು ಸಂಬಂಧಪಟ್ಟವರನ್ನು ಭೇಟಿ ಮಾಡಿದ್ದಾರೆ. ನಮ್ಮ ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಸರ್ಕಾರದ ಸಚಿವರ ಜೊತೆಯೂ ಸಂಪರ್ಕದಲ್ಲಿದ್ದೇವೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು Supreme Court ನಿಂದ ಯಾವ ರೀತಿ ನ್ಯಾಯ ದೊರಕಿಸಿಕೊಡಬೇಕು ಮತ್ತು ಅಡಿಕೆ

ಬೆಳೆಗಾರರಿಗೆ ಏನೇನು ತೊಂದರೆಯಾಗಿದೆ, ಅದನ್ನು ಪರಿಹರಿಸಲು ಏನೇನು ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡುತ್ತೇವೆ. ನಾನು ಅಡಿಕೆ ಬೆಳೆಗಾರರ ಜೊತೆಯಲ್ಲಿ ಇದ್ದೇನೆ. ಅವರಿಗೆ ಅನುಕೂಲ ಮಾಡಿಕೊಡಲು ಎಲ್ಲಾ ರೀತಿಯ ಪ್ರಾಮಾಣಿಕ ಪ್ರಯತ್ನ ಮಾಡಿ ಪ್ರತಿಪಕ್ಷದ ನಾಯಕರ ಜೊತೆ ಸಮಾಲೋಚನೆ ಮಾಡಿ ಕೇಂದ್ರಕ್ಕೆ ನಿಯೋಗ ತೆಗೆದುಕೊಂಡು ಹೋಗಿ ಈ ಸಮಸ್ಯೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

**ಜಿಲ್ಲಾ ಹಾಗೂ ರಾಜ್ಯ ಹೆದ್ದಾರಿ ರಸ್ತೆಗಳ ಸ್ಥಿತಿಗತಿಗಳು**

3 (15) ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಜಿಲ್ಲಾ ಮುಖ್ಯ ರಸ್ತೆಗಳಾದ ಸಂಗಾವಿಯಿಂದ ಹಾಬಾಳ, ಕೋಲಕುಂದಾ ಗ್ರಾಮದಿಂದ ಮೇದಕ ಮತ್ತು ಬಟಗೇರಾ – ಸಿದ್ದಾಪೂರ ಹಾಗೂ ರಾಜ್ಯ ಹೆದ್ದಾರಿ ಬಟಗೇರಾದಿಂದ ಮೋತಕಪಲ್ಲಿ ಮತ್ತು ಮುಧೋಳದಿಂದ–ಹಂದರಗಿ (ಮಹಾರಾಷ್ಟ್ರ ಗಡಿಯಿಂದ ಮುರ್ಕಿ–ಅವರಾದ–ಬೀದರ್–ಚಿಂಚೋಳಿ–ಸೇಡಂ–ಹಂದರಕಿ ರಾಜ್ಯ ಹೆದ್ದಾರಿ 15ರ ವರೆಗೆ / ರಾಜ್ಯ ಹೆದ್ದಾರಿ–10 ರಿಂದ ಮುಧೋಳ–ಯಲಗೇರಾದಿಂದ ಆಂಧ್ರಪ್ರದೇಶ ಗಡಿಯವರೆಗಿನ ರಸ್ತೆಗಳು (ರಾಷ್ಟ್ರೀಯ ಹೆದ್ದಾರಿ ಸಂಖ್ಯೆ–127) ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳೇನು ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿದೆ.